

ಬರೆಯುವ ಪ್ರಯತ್ನ ಮಾಡಿದ್ದೀರ?

...ಇಲ್ಲ, ಆ ಪ್ರಯತ್ನ ಮಾಡಿಲ್ಲ. ಬರವಣಿಗೆಯ ಆರಂಭಿಕ ದಿನಗಳಲ್ಲಿ 'ಆತ್ಮಗೀತ' ಹೆಸರಿನ ಪುಸ್ತಕಗಾತ್ರದ ದೀರ್ಘ ಕವಿತೆ ಬರೆದೆ, ಅದೊಂಥರ ಕಾವ್ಯಾತ್ಮಕ ಆತ್ಮಕತೆಯಾಗಿತ್ತು, ಆಗ ನನಗಿನ್ನೂ ಇಪ್ಪತ್ತೈದರ ವಯಸ್ಸು. ನಾನು ಮಾಡಿದ ಪ್ರವಾಸಗಳನ್ನು ಆಧರಿಸಿ ಕೆಲವು ಸರಣಿ ಕವಿತೆಗಳನ್ನು ಬರೆದಿದ್ದೇನೆ. ನೀವು ಹೇಳುವ 'ಮಹಾಕಾವ್ಯ'ವನ್ನು ಬರೆಯುತ್ತೇನೋ ಇಲ್ಲವೋ ಹೇಳಲಾರೆ; ನನ್ನ ಕವಿತೆಗಳು ಬಹಳ ಅಪರೂಪವಾಗಿ ಎಲ್ಲೋ ಒಮ್ಮೊಮ್ಮೆ ಪೂರ್ವನಿರ್ಧರಿತವಾಗಿರುತ್ತವೆ.

◆ ಮಲಯಾಳಂ ಕವಿತೆಯ ನಾಳೆಗಳ ಬಗ್ಗೆ ಏನು ಹೇಳುವಿರಿ?

ನಾನು ಮಲಯಾಳಂ ಕವಿತೆಗಳನ್ನು ಹತ್ತಿರದಿಂದ ಗಮನಿಸುತ್ತಿರುತ್ತೇನೆ. ಇಲ್ಲಿ ಕೆಲವು ಹೊಸ ಪ್ರವೃತ್ತಿಗಳು ಕಾಣುತ್ತಿವೆ: ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವ ಉಪಭಾಷೆಗಳ ಬಳಕೆ ಇವುಗಳಲ್ಲಿ ಒಂದು. ಕಾದಂಬರಿಯಲ್ಲಿ ಈ ಬಗೆಯ ಭಾಷೆ ಬಳಕೆಯಲ್ಲಿತ್ತು, ಕಾವ್ಯದಲ್ಲಿ ಅಷ್ಟಿಲ್ಲ. ಈ ಬಳಕೆಯಲ್ಲಿ ಪ್ರಾದೇಶಿಕ ಉಪಭಾಷೆಗಳಂತೆಯೇ ಸಾಮಾಜಿಕ/ಸಾಮುದಾಯಿಕ ಉಪಭಾಷೆಗಳೂ ಇವೆ. ಒಟ್ಟಂದದಲ್ಲಿ ಮಲಯಾಳಂನ ಬಹುರೂಪಗಳು ಕವಿತೆಯಲ್ಲಿ ಕಾಣಿಸಿಕೊಳ್ಳುತ್ತಿವೆ. ಎರಡನೆಯದಾಗಿ, ಕವಿತೆಯು ಬಳಸುವ ಮಲಯಾಳಂ ಭಾಷೆಯಲ್ಲಿ ಸಂಸ್ಕೃತ ಪದಗಳ ಪ್ರಮಾಣವು ಕ್ರಮೇಣ ಕಡಿಮೆಯಾಗುತ್ತಿದೆ. ಆದರೂ ಸಂಸ್ಕೃತ ಪದಗಳ ಬಳಕೆಯನ್ನು ಸಂಪೂರ್ಣವಾಗಿ ಬಿಟ್ಟುಬಿಡಲು ಸಾಧ್ಯವಿಲ್ಲ. ಮೂರನೆಯದಾಗಿ, ಆದಿವಾಸಿ ಭಾಷೆಗಳನ್ನು ಕಾವ್ಯದಲ್ಲಿ ಬಳಸುತ್ತಿದ್ದಾರೆ, ಇವರಲ್ಲಿ ಕೆಲವರಂತೂ ಅದ್ಭುತ ಆಧುನಿಕ ಕವಿತೆಗಳನ್ನು ಬರೆದಿದ್ದಾರೆ; ಕೆಲವೊಮ್ಮೆ ಇವರುಗಳು, ಮಲಯಾಳಿ ಲಿಪಿಯಲ್ಲಿ ಆದಿವಾಸಿ ಭಾಷೆಯ ಜೊತೆಗೆ, ನಿತ್ಯ ಬಳಸುವ ಮಲಯಾಳಿ ಭಾಷೆಯಲ್ಲಿ ಕವಿತೆಯ ಅವೃತ್ತಿಯನ್ನು ನೀಡುತ್ತಾರೆ. ಇತ್ತೀಚೆಗೆ, ತರುಣ ತರುಣಿಯರಿಗೆ ಕಾವ್ಯವೆನ್ನುವುದು ಅತ್ಯಂತ ಇಷ್ಟದ ಅಭಿವ್ಯಕ್ತಿ ಮಾಧ್ಯಮವಾಗಿದೆ. ಸೈಬರ್ ವೇದಿಕೆಗಳು ಮತ್ತು ಹಲವು ಕಾವ್ಯಸಂಘಗಳ ಉದಯಕ್ಕೆ ಧನ್ಯವಾದ ಹೇಳಲೇಬೇಕು. ಇವುಗಳ ಉಳಿವನ್ನು ಕಾಲವೇ ನಿರ್ಧರಿಸುತ್ತದೆ, ಆದರೆ ಇತ್ತ ಕಡೆಗಿನ ಒಲವೇ ತುಂಬ ಉತ್ಸಾಹಕರವೆನಿಸುತ್ತದೆ.

* * *

*ಸ್ಟೇಟ್: ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಿಂದ ರೂಪಿತವಾದ ವ್ಯವಸ್ಥೆ. ಒಟ್ಟಂದದಲ್ಲಿ ಇದು ನಾಗರಿಕ ಜೀವನವನ್ನು ನಿಯಂತ್ರಿಸುತ್ತದೆ. ಪ್ರಜಾಪ್ರಭುತ್ವವು ಇದರ ಒಂದು ಬಗೆ.

ಜಾಕ್ವೆಸ್ ರ್‍ಯಾನ್ಸಿಯರ್ (1940): ಫ್ರೆಂಚ್ ತತ್ವಜ್ಞಾನಿ, ಪ್ರಾಧ್ಯಾಪಕರು. ಇತಿಹಾಸ, ರಾಜಕೀಯ, ಕಲೆ ಮತ್ತು ಸೌಂದರ್ಯ ಮೀಮಾಂಸೆ ಕುರಿತು ಆಳವಾಗಿ ಅಧ್ಯಯನ ನಡೆಸಿದವರು. 'ಸಮಾನತೆ' ಕುರಿತ ಅವರ ಕೃತಿಗಳು, ಕಲೆ, ಸಾಹಿತ್ಯ ಮತ್ತು ಸಿನಿಮಾ ಕುರಿತ ಸಂಶೋಧನಾ ಗ್ರಂಥಗಳು ಜಗತ್ಪ್ರಸಿದ್ಧವಾಗಿವೆ. ●